ರಾಜ್ಯದಲ್ಲಿನ ನ್ಯಾಯಾಂಗ ತನಿಖೆಗಳು

೧೪೨೨. ಶ್ರೀ ಆರ್. ಎಸ್. ನಾಯ್ಕ (ಭಟಕಳ).--ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೩ ರಿಂದ ಈ ವರೆವಿಗೆ ಸರಕಾರದವರು ಎಷ್ಟು ಪ್ರಕರಣಗಳಲ್ಲಿ ನ್ಯಾಯಾಂಗ ತನಿಖೆ ನಡೆಸಲು ಆಜ್ಞೆ ಹೊರಡಿಸಿದೆ?

ಆ) ಅವು ಯಾವುವು?

ಇ) ಎಷ್ಟು ಪ್ರಕರಣಗಳಲ್ಲಿ ತನಿಖಾ ವರದಿ ಬಂದಿದೆ?

ಈ) ತನಿಖಾ ವರದಿಯ ಪ್ರಕಾರ ಎಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).--

ಅ) ೧೯.

ಆ) ಲಗತ್ತಿಸಿದ ಅನುಬಂಧ ೧ರ ಪ್ರಕಾರ

ಇ) ೯.

ಈ) ೫,

ಅನುಬಂಧ ೨ರಲ್ಲಿ ವಿವರಣೆ ಕೊಟ್ಟಿದೆ.

ಅನುಬಂಧ—೧

ಸರ್ಕಾರದಿಂದ ಈ ಕೆಳಗೆ ಕಾಣಿಸಿದ ೧೯ ಆಯೋಗಗಳು ನೇಮಿಸಲ್ಪಟ್ಟಿವೆ.

ಕ್ರಮ ಸಂಖ್ಯೆ	ಆಯೋಗದ ಹೆಸರು	ನೇಮಿಸಿದ ಉದ್ದೇಶ	ಆದೇಶದ ಸಂಖ್ಯೆ ಹಾಗು ದಿನಾಂಕ	ಪ್ರಸ್ತುತ ಸ್ಥಿತಿ
೧	೨	೩	೪	೫
೧	ರಂಗನಾಥ ಅಗ್ನಿಹೋತ್ರಿ ವಿಚಾರಣಾ ಆಯೋಗ	ವಿವೇಕನಗರ, ಬೆಂಗಳೂರು ಹಾಗು ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು.	ಎಚ್‌ಡಿ ೫ ಪಿಸಿಇ ೮೫ (೧) ದಿನಾಂಕ ೭–೨–೧೯೮೫	ಗೃಹ ಇಲಾಖೆ
೨	ಮಹಮ್ಮದ ಅಸಿಫ್ ವಿಚಾರಣೆ ಆಯೋಗ	ನಾಗಮಂಗಲ ಹಾಗು ದೊಡ್ಡಹಳ್ಳಿಯಲ್ಲಿ ನಡೆದ ಗೋಳಿಬಾರಿನ ಬಗ್ಗೆ ವಿಚಾರಣೆ ಮಾಡಲು.	ಎಚ್‌ಡಿ ೫ ಪಿಸಿಇ ೮೫ (೨) ದಿನಾಂಕ ೭–೨–೧೯೮೫	,,
೩	ಎಸ್ ಎಂ. ಬ್ಯಾಡಗಿ ವಿಚಾರಣಾ ಆಯೋಗ	ಬಳ್ಳಾರಿಯಲ್ಲಿ ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು.	ಎಚ್‌ಡಿ ೮ ಪಿಸಿಇ ೮೫ ದಿನಾಂಕ ೨೪–೩–೧೯೮೫	,,
೪	ಪಿ.ಕೆ. ಶ್ಯಾಮಸುಂದರ ವಿಚಾರಣಾ ಆಯೋಗ	ಮಾಲೂರಿನಲ್ಲಿ ನಡೆದ ಪೋಲಿಸ್ ಗೋಲಿಬಾರ್ ಬಗ್ಗೆ ವಿಚಾರಣೆ ಮಾಡಲು	ಎಚ್‌ಡಿ ೩೧ ಪಿಸಿಇ ೮೫ ದಿನಾಂಕ ೨೯–೮–೧೯೮೫	,,
೫	ಎ ವಿ. ಬಾಲಸುಬ್ರಮಣ್ಯಂ ವಿಚಾರಣಾ ಆಯೋಗ	ಕೆ.ಜಿ.ಎಫ್.ನಲ್ಲಿ ನಡೆದ ಗೋಲಿಬಾರ್ ಬಗ್ಗೆ ವಿಚಾರಣೆ ಮಾಡಲು	ಎಚ್‌ಡಿ ೫೨ ಪಿಸಿಇ ೮೫ ದಿನಾಂಕ ೨೯–೮–೧೯೮೫	,,
೬	ಎನ್.ಡಿ. ವೆಂಕಟೇಶ ಆಯೋಗ	ಶ್ರೀ ಉಗ್ರನರಸಿಂಹಪ್ಪ ಅವರ ಅಪಹರಣದ ಪ್ರಕರಣವನ್ನು ವಿಚಾರಣೆ ಮಾಡಲು	ಎಚ್‌ಡಿ ೭ ಪಿಸಿಇ ೮೪ ದಿನಾಂಕ ೨೧–೫–೧೯೮೪	,,
೭	ಪಿ.ಎ. ಕುಲಕರ್ಣಿ ವಿಚಾರಣಾ ಆಯೋಗ	ಬೆಂಗಳೂರಿನಲ್ಲಿ ಕೆಲವಡೆಯಲ್ಲಿ ನಡೆದ ಗೋಲಿಬಾರ್ ಬಗ್ಗೆ ವಿಚಾರಣೆ ಮಾಡಲು	ಎಚ್‌ಡಿ ೨೧ ಪಿಸಿಇ ೮೪ ದಿನಾಂಕ ೨೧–೭–೧೯೮೪	,,
೮	ಆರ್.ಜಿ. ವೈದ್ಯನಾಥನ್ ವಿಚಾರಣಾ ಆಯೋಗ	ಹುಬ್ಬಳ್ಳಿಯಲ್ಲಿ ನಡೆದ ಗೋಲಿಬಾರ್ ಬಗ್ಗೆ ವಿಚಾರಣೆ ಮಾಡಲು.	ಎಚ್‌ಡಿ ೩೨ ಪಿಸಿಇ ೮೪ ದಿನಾಂಕ ೧೬–೬–೧೯೮೪	,,

೧	೨	೩	೪	೫
೯	ಎ.ಬಿ ಮಂರಗೌಡ ವಿಚಾರಣಾ ಆಯೋಗ	ಹೊನ್ನಾಳಿಯಲ್ಲಿ ನಡೆದ ಪೋಲಿಸ್ ಗೋಳಿಬಾರ್ ಬಗ್ಗೆ ವಿಚಾರಣೆಮಾಡಲು	ಎಚ್‌ಡಿ ೧೧ ಪಿಸಿಇ ೮೫ ದಿನಾಂಕ ೨೦-೪-೧೯೮೫	,,
೧೦	ಡಿ.ಪಿ. ಹಿರೇಮಠ ವಿಚಾರಣಾ ಆಯೋಗ	ಹುನಗುಂದದಲ್ಲಿ ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು	ಎಚ್‌ಡಿ ೪೩ ಪಿಸಿಇ ೮೪ ದಿನಾಂಕ ೮-೮-೧೯೮೪	,,
೧೧	ನ್ಯಾಯಮೂರ್ತಿ ಬಿ.ಪಿ. ಭೋಪಣ್ಣ ಆಯೋಗ	ಶುದ್ಧೀಕರಿಸಿದ ಸ್ಪಿರಿಟ್ ಬಗ್ಗೆ ವಿಚಾರಣೆ ಮಾಡಲಂ	ಎಚ್‌ಡಿ ೨೧ ಪಿಸಿಇ ೮೫ ದಿನಾಂಕ ೧೦-೬-೧೯೮೫	,,
೧೨	ಆರ್.ಜಿ. ದೇಸಾಯಿ ಆಯೋಗ	ಮೊಯ್ಲಿ ಹಾಗು ಬೈರೆಗೌಡ ಅವರ ಟೇಪ್ ಹಗರಣ ಬಗ್ಗೆ ವಿಚಾರಿಸಲು	ಎಲ್‌ಎಡಬ್ಲ್ಯೂ ೬೨ ಎಲ್‌ಜಿಆರ್ ೮೪ ದಿನಾಂಕ ೮-೧೦-೧೯೮೪	ಕಾನೂನು ಹಾಗು ಸಂಸದೀಯ ವ್ಯವ ಹಾರಗಳ ಇಲಾಖೆ
೧೩	ವೆಂಕಟೇಶ ಪಾಟೀಲ್ ಆಯೋಗ	ಕೆ. ದೊಡ್ಡಿಯಲ್ಲಿ ಪಿಯುಸಿ ೧೧ರ ಪ್ರಶ್ನೆ ಕಳುವಾದ ಬಗ್ಗೆ ವಿಚಾರಣೆ ಮಾಡಲು	ಇಡಿ ೯೩ ಟಿಸಿಯು ೮೪ ದಿನಾಂಕ ೧-೮-೧೯೮೪	ವಿದ್ಯಾ ಇಲಾಖೆ
೧೪	ಶ್ರೀ ವೆಂಕಟೇಶಸ್ವಾಮಿ ಆಯೋಗ	ರಾಜ್ಯದಿಂದ ಹೊರಗಡೆ ಭತ್ತ ಅಕ್ಕಿ ಯನ್ನು ಸಾಗಿಸಲು ಆಕ್ಷೇಪಣಾ ರಹಿತ ಪತ್ರವನ್ನು ನೀಡಿದ್ದರ ಬಗ್ಗೆ ವಿಚಾರಣೆ ಮಾಡಲು	ಎಫ್‌ಎಫ್‌ಡಿ ೪೧೭ ಇಎಫ್‌ಡಿ ೮೨ ದಿನಾಂಕ ೨೪-೪-೧೯೮೪	ಆಹಾರ ಹಾಗೂ ಸಾರಿಗೆ ಇಲಾಖೆ
೧೫	ಶ್ರೀ ಆರ್.ಜಿ. ದೇಸಾಯಿ ಆಯೋಗ	ಗಂಗಾರಾಮು ಕಟ್ಟಡ ಬಿದ್ದ ಬಗ್ಗೆ ವಿಚಾರಣೆ ಮಾಡಲು	ಎಚ್‌ಯುಡಿ ೨೨೧ ಎಂಎನ್‌ವೈ ೮೩ ದಿನಾಂಕ ೮-೧೧-೧೯೮೩	ವಸತಿ ಹಾಗು ನಗರಾಭಿವೃದ್ಧಿ ಇಲಾಖೆ
೧೬	ನ್ಯಾಯಮೂರ್ತಿ ಶ್ರೀ ವೆಂಕಟೇಶ ಆಯೋಗ	ಸಿಮೆಂಟ್ ವಿತರಣೆಯಲ್ಲಿ ನಡೆದ ಅಕ್ರಮ ಗಳ ಬಗ್ಗೆ	ಸಿಐ ೦೭ ಎಸ್‌ಎಸ್‌ಎಂ ೮೧ ದಿನಾಂಕ ೧೮-೨-೧೯೮೪	ವಾಣಿಜ್ಯ ಹಾಗು ಕೈಗಾರಿಕಾ ಇಲಾಖೆ
೧೭	ನ್ಯಾಯಮೂರ್ತಿ ಸದಾನಂದ ಸ್ವಾಮಿ ಆಯೋಗ	ರೂ. ೧.೨೭ ಕೋಟಿ ಹೆಚ್ಚುವರಿ ಹಣ ಕೊಟ್ಟಿದ್ದರ ಬಗ್ಗೆ ವಿಚಾರಿಸಲು	ಪಿಡಬ್ಲ್ಯೂಡಿ ೧೪೮ ಎನ್‌ಎಚ್‌ಪಿ ೮೫ ದಿನಾಂಕ ೨೭-೧೧-೧೯೮೫	ಲೋಕೋಪಯೋಗಿ ಹಾಗೂ ವಿದ್ಯುತ್‌ಚ್ಛಕ್ತಿ ಇಲಾಖೆ
೧೮	ಶ್ರೀ ಟಿ. ವೆಂಕಟಸ್ವಾಮಿ ಆಯೋಗ	ಜಾರಿಯಲ್ಲಿ ಇರುವ ಹಿಂಬಳಿದ ವರ್ಗಗಳ ಪಟ್ಟಿಯ ವಿಮರ್ಶೆ	ಎಸ್‌ಡಬ್ಲ್ಯೂಎಲ್ ೭೬ ಬಿಸಿಎ ೮೩ ದಿನಾಂಕ ೧೧-೭-೧೯೮೩	ಸಮಾಜ ಕಲ್ಯಾಣ ಹಾಗು ಕಾರ್ಮಿಕ ಇಲಾಖೆ
೧೯	ಕೆ.ಎಸ್. ಪುಟ್ಟಸ್ವಾಮಿ ಆಯೋಗ	ವೈದ್ಯಕೀಯದಲ್ಲಿ ಸ್ನಾತಕೋತ್ತರ ಪದವಿಗೆ ಸೀಟು ದೊರಕಿಸಲು ಯತ್ನಿಸಿದ ಶ್ರೀ ಭರತ ಹೆಗ್ಡೆಯವರ ಮೇಲಿನ ಆಪಾದನೆಯ ಬಗ್ಗೆ ವಿಚಾರ ಮಾಡಲು	ಎಚ್‌ಎಫ್‌ಡಬ್ಲ್ಯೂ ೨೫೭ ಎಂಎಫ್‌ಎಫ್ ದಿನಾಂಕ ೨೨-೧೧-೧೯೮೫	ಆರೋಗ್ಯ ಹಾಗು ಕುಟುಂಬ ಕಲ್ಯಾಣ ಇಲಾಖೆ

ಅನುಬಂಧ-2

1. ಡಿ.ಪಿ. ಹಿರೇಮಂಠ ವಿಚಾರಣಾ ಆಯೋಗ.—

ದಿನಾಂಕ ೨೬-೭-೧೯೮೪ ರಂದು ಹುನಗುಂದದಲ್ಲಿ ನಡೆದ ಪೋಲೀಸ್ ಗೋಲಿಬಾರ್‌ನ ಬಗ್ಗೆ ತನಿಖೆ ನಡೆಸಲು ಈ ವಿಚಾರಣಾ ಆಯೋಗವನ್ನು ಸರ್ಕಾರವು ದಿನಾಂಕ ೮-೮-೮೪ರ ತನ್ನ ಆದೇಶ ಕ್ರಮಾಂಕ ಹೆಚ್‌ಡಿ ೪೩ ಪಿಸಿಇ ೮೪ರಲ್ಲಿ ನೇಮಿಸಿತು. ಸರ್ಕಾರವು ಈ ಆಯೋಗದ ವರದಿಯನ್ನು ಒಪ್ಪಿದೆ ಈ ಮೇರೆಗೆ, ತಾಲ್ಲೂಕು ಮಾಜಿಸ್ಟ್ರೇಟ್ ಮತ್ತು ಸಬ್-ಡಿವಿಜನಲ್ ಮ್ಯಾಜಿಸ್ಟ್ರೇಟ್ ಹಾಗೂ ಕೆಲವು ಪೋಲೀಸ್ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲು ಆದೇಶವನ್ನು ಕೊರಡಿಸಿದೆ. ಉತ್ತರ ಪ್ರದೇಶ ಹಾಗೂ ಮಹಾರಾಷ್ಟ್ರದಲ್ಲಿರುವಂತೆ, ಐಪಿಸಿ ಸೆಕ್ಷನ್ ೧೦೭ಕ್ಕೆ ತಿದ್ದುಪಡಿ ಮಾಡಲು ಬಂದಿರುವ ಶಿಫಾರಸ್ಸನ್ನು ಈಗ ಪರಿಶೀಲಿಸಲಾಗುತ್ತಿದೆ.

2. ಆರ್.ಜಿ. ದೇಸಾಯಿ ವಿಚಾರಣಾ ಆಯೋಗ.—

ದಿನಾಂಕ ೧೨-೯-೧೯೮೩ ರಂದು ಗೋಪಾಲ ಥಿಯೇಟರ್ ಕಾಂಪ್ಲೆಕ್ಸ್ ಹತ್ತಿರ ಹೋಟೆಲ್ ಕಟ್ಟಡ ಕುಸಿತದ ಬಗ್ಗೆ ವಿಚಾರಣೆ ಮಾಡಲು ಈ ವಿಚಾರಣಾ ಆಯೋಗವನ್ನು ಸರ್ಕಾರಿ ಆದೇಶ ಸಂಖ್ಯೆ ಎಚ್‌ಯುಡಿ ೨೮೧ ಎಂಎಸ್‌ವೈ ೮೩ ದಿನಾಂಕ ೮-೧೧-೧೯೮೩ರಲ್ಲಿ ನೇಮಿಸಲಾಯಿತು. ವಿಚಾರಣಾ ಆಯೋಗವು ದಿನಾಂಕ ೨೬-೭-೧೯೮೫ರ ತನ್ನ ವರದಿಯಲ್ಲಿ ಮಾಸ್ತು ಶಿಲ್ಪ ರಚನಾ ಅಭಿಯಂತರ,ಗುತ್ತಿಗೆದಾರ ಹಾಗೂ ಯಜಮಾನ ಅವರುಗಳ ಕಾರ್ಯ ವಿಫಲತೆಯನ್ನು ದೃಢಪಡಿಸಿದೆ. ಮಹಾನಗರಪಾಲಿಕೆಯ ಕೆಲವು ಅಧಿಕಾರಿಗಳು ಕಾರ್ಯವಿಧಾನಗಳನ್ನು ಕೈಗೊಳ್ಳುವಂತೆ ಒತ್ತಾಯಿಸಲಿಲ್ಲವೆಂದು ತಿಳಿಸಿದೆ. ಆಯೋಗವು ರಾಜ್ಯದಲ್ಲಿ ಬಹು ಎತ್ತರವಾದ ಕಟ್ಟಡಗಳ ನಿರ್ಮಾಣಗಳ ಬಗ್ಗೆ ತಜ್ಞರ ಸಮಿತಿಯನ್ನು ರಚಿಸುವಂತೆ ಸಲಹೆಯನ್ನು ನೀಡಿದೆ.

ಅದೇ ಪ್ರಕಾರ ಸರ್ಕಾರವು ತನ್ನ ದಿನಾಂಕ ೩-೧೧-೧೯೮೫ರ ಆದೇಶದಲ್ಲಿ ಇತರ ವಿಷಯಗಳ ಜೊತೆಗೆ ವಾಸ್ತು ಶಿಲ್ಪ ರಚನಾ ಅಭಿಯಂತರ ಗುತ್ತಿಗೆದಾರ ಹಾಗೂ ಯಜಮಾನ ಅವರ ಮೇಲೆ ಅವರ ಕಾರ್ಯವಿಫಲತೆಗೆ ಕ್ರಿಮಿನಲ್ ಕಾರ್ಯವಾಹಿಯನ್ನು ಪ್ರಾರಂಭಿಸಲು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲು ತಜ್ಞರ ಸಮಿತಿಯನ್ನು ನೇಮಿಸಲು ಒಪ್ಪಿದೆ.

3. ಶ್ರೀ ಎಸ್.ಎಂ. ಬ್ಯಾಡಗಿ ವಿಚಾರಣಾ ಆಯೋಗ.—

ಫೆಬ್ರುವರಿ ೧೯೮೩ ರಂದು ಬಳ್ಳಾರಿಯಲ್ಲಿ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು ಸರ್ಕಾರವು ದಿನಾಂಕ ೨೪-೩-೧೯೮೩ರ ತನ್ನ ಆದೇಶದ ಕ್ರಮಾಂಕ ಎಚ್‌ಡಿ ೮೮ ಪಿಸಿಇ ೮೩ರಲ್ಲಿ ಈ ವಿಚಾರಣಾ ಆಯೋಗವನ್ನು ನೇಮಕ ಮಾಡಿತು, ಆಯೋಗವು ದಿನಾಂಕ ೮-೯-೧೯೩ ರಂದು ತನ್ನ ವರದಿ ಸಲ್ಲಿಸಿದೆ. ಈ ಘಟನೆಗೆ ಆಯೋಗವು ಕೆಲವು ಪೋಲೀಸ್ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಸೂಚಿಸಿದೆ. ಪೋಲೀಸರು ಬಳಸಿದ ಬಲ ಪ್ರಯೋಗವು ನ್ಯಾಯ ಸಮ್ಮತವಲ್ಲ ಸಕಾರಣವಲ್ಲವೆಂದು ಆಯೋಗವು ತೀರ್ಮಾನಿಸಿದೆ.

ಈ ಬಗ್ಗೆ ಸರ್ಕಾರವು ಆಯೋಗದ ವರದಿಯನ್ನು ಒಪ್ಪಿ ಬಳ್ಳಾರಿಯ ಅಂದಿನ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸರ ಮೇಲೆ ಕ್ರಮ ಬದ್ಧ ಇಲಾಖಾ ವಿಚಾರಣೆ ನಡೆಸಲು ಕ್ರಮ ಕೈಗೊಂಡಿದೆ.

4. ಪಿ. ಕೆ, ಶ್ಯಾಮಸುಂದರ ವಿಚಾರಣಾ ಆಯೋಗ.—

ದಿನಾಂಕ ೧೩-೫-೧೯೮೩ ರಂದು ಮಾಲೂರಿನಲ್ಲಿ ನಡೆದ ಪೋಲೀಸ್ ಗೋಲಿಬಾರಿನ ಬಗ್ಗೆ ದಿನಾಂಕ ೨೯-೩-೧೯೮೫ರ ಸರ್ಕಾರಿ ಆದೇಶ ಕ್ರಮಾಂಕ ಹೆಚ್‌ಡಿ ೩೧ ಪಿಸಿಇ ೮೫ರಲ್ಲಿ ಈ ಆಯೋಗವನ್ನು

ನೇಮಕ ಮಾಡಲಾಯಿತು, ಈ ಗೋಲಿಬಾರಿಗೆ ಆದೇಶ ಹೊರಡಿಸಿದ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಮತ್ತು ಪೋಲೀಸರು ಜವಾಬ್ದಾರರಾಗಿದ್ದು ಬಳಸಿದ ಪೋಲೀಸ್ ಪಡೆಯು ಬಲಪ್ರಯೋಗವು ಅತಿಯಾಗಿತ್ತು ಎಂದು ಆಯೋಗವು ದೃಢಪಡಿಸಿದೆ.

ಈ ವಿಚಾರಣೆ ಆಯೋಗದ ವರದಿಯನ್ನು ಸರ್ಕಾರವು ಒಪ್ಪಿದೆ. ಪೋಲೀಸ್ ಅಧಿಕಾರಿಗಳು ಮತ್ತು ಮ್ಯಾಜಿಸ್ಟ್ರೇಟ್‌ರ ಮೇಲೆ ಕ್ರಮವನ್ನು ಪ್ರಾರಂಭಿಸಲಾಗಿದೆ. ಇಬ್ಬರು ಅಖಿಲ ಭಾರತ ಸೇವಾ ಅಧಿಕಾರಿಗಳಿಗೆ ನೋಟೀಸನ್ನು ಕೊಡಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ರಾಜ್ಯ ಸೇವಾ ನೌಕರರೊರ್ವರ ಮೇಲೆ ಇಲಾಖಾ ವಿಚಾರಣೆಯನ್ನು ತೆಗೆದುಕೊಳ್ಳುವ ಆದೇಶ ಪರಿಶೀಲನೆಯಲ್ಲಿದೆ. ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ರವರ ಅಧೀನದಲ್ಲಿ ಬರುವ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಸೂಚಿಸಿ ಗೃಹ ಇಲಾಖೆಯು ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ರವರಿಗೆ ಆದೇಶ ನೀಡಿದೆ.

5. ಎ.ವಿ. ಬಾಲಸುಬ್ರಮಣ್ಯಂ ವಿಚಾರಣಾ ಆಯೋಗ.—

ದಿನಾಂಕ ೨-೮-೧೯೮೩ರಲ್ಲಿ ಕೆ.ಜಿ ಎಫ್ ನಲ್ಲಿ ನಡೆದ ಪೋಲೀಸ್ ಗೋಲಿಬಾರಿನ ಬಗ್ಗೆ ವಿಚಾರಣೆ ನಡೆಸಲು ದಿನಾಂಕ ೯-೩-೧೯೮೩ ರಂದು ಸರ್ಕಾರವು ತನ್ನ ಆದೇಶ ಕ್ರಮಾಂಕ ಹೆಚ್‌ಡಿ ೫೦ ಪಿಸಿಇರಲ್ಲಿ ಈ ಆಯೋಗವನ್ನು ನೇಮಕ ಮಾಡಿತು. ಈ ಪೋಲೀಸ್ ಗೋಲಿಬಾರ್ ಸಕಾರಣವಾದುದೆಂದು ಆಯೋಗವು ತೀರ್ಮಾನಿಸಿದೆ. ಪೋಲೀಸ್ ಪಡೆಯ ಬಲಪ್ರಯೋಗವು ಅತಿಯಾದುದೆಂತೆ ಕಂಡರೂ, ಪೋಲೀಸರು ಅಂದು ವಿರುದ್ಧ ಗುಂಪಿನವರು ಮಾಡಿದ ಗೊಂದಲ ಮತ್ತು ಉದ್ವೇಗಗಳಿಂದ ಹೆಚ್ಚು ಒತ್ತಡಕ್ಕೆ ಒಳಗಾಗಿದ್ದ ಕಾರಣ ಎಷ್ಟು ಪೋಲೀಸ್ ಪಡೆಬೇಕೆಂದು ನಿರ್ಣಯಿಸಲು ಮತ್ತು ಪೋಲೀಸರ ವರ್ತನೆ ಯಾವ ರೀತಿಯಲ್ಲಿರಬೇಕೆಂದು ಮಾರ್ಗದರ್ಶನ ನೀಡಲೂ ಇಂತಹ ಸಂದರ್ಭದಲ್ಲಿ ಸಾಧ್ಯವಾಗದುವುದಿಲ್ಲವೆಂದು ಯೋಚಿಸಬೇಕಾಗುತ್ತದೆ,

ಸರ್ಕಾರವು ಈ ಆಯೋಗದ ನಿರ್ಣಯಗಳನ್ನು ಒಪ್ಪಿ ಸಂಬಂಧಿಸಿದ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಲು ಸೂಚಿಸಿದೆ. ಇದರ ಬಗ್ಗೆ ಕೇಂದ್ರ ಪಲಯದ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರಿಂದ ವರದಿಯನ್ನು ನೀರೀಕ್ಷಿಸಲಾಗಿದೆ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಾದ ಕೆ.ಹೆಚ್. ಶ್ರೀನಿವಾಸ್‌ರವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ ಅದೇ ಉತ್ತರವೇ ಇವರಿಗೂ ಅನ್ವಯಿಸುತ್ತದೆ. ಆದರೆ ಇದರಲ್ಲಿ 'ಈ' ಪ್ರಶ್ನೆಗೆ ಉತ್ತರವನ್ನು ಕೊಡುವಾಗ ೫೦ ಪ್ರಕರಣಗಳಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಎಂದು ಕೊಟ್ಟಿದ್ದೇನೆ '೫೦' ಎಂಬುದನ್ನು '೬' ಎಂದು ಮಾಡಿಕೊಳ್ಳಬೇಕು ಅಷ್ಟೆ.

ಶ್ರೀ ಆರ್.ಎನ್. ನಾಯಕ್.— ಸ್ವಾಮಿ, ಅದು ಟೆಕ್ನಿಕಲ್ ಆಗುತ್ತದೆ ನಾನು ಕೇಳಿದ್ದುದು ಅದಲ್ಲ...

ಶ್ರೀ ಎ. ಲಕ್ಷ್ಮೀಸಾಗರ್.—ತನಿಖಾ ವರದಿಯ ಪ್ರಕಾರ ಎಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಳಿರುವ ಪ್ರಶ್ನೆಗೆ ನಾನು '೫೦' ಪ್ರಕರಣಗಳಲ್ಲಿ ಎಂದು ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಇದರಲ್ಲಿ ಒಂದು ತಪ್ಪಾಗಿದೆ. '೫೦' ಎಂಬುದನ್ನು '೬' ಎಂದು ಮಾಡಿಕೊಂಡರೆ ಸರಿಯಾಗುತ್ತದೆ.

ಶ್ರೀ ಆರ್.ಎನ್. ನಾಯಕ್.— ಸ್ವಾಮಿ. ಇಲ್ಲಿ ನಮಗೆ ಕೊಟ್ಟಿರತಕ್ಕ ಉತ್ತರದಲ್ಲಿ ಅನೆಕ್ಸರ್ ೨ರಲ್ಲಿ ಇಂಗ್ಲೀಷಿನಲ್ಲಿ ಕೊಟ್ಟಿದ್ದೀರಿ, ಇದರಲ್ಲಿ ಪ್ಯಾರಾ ೧ರಲ್ಲಿ ಕೊನೆಯ ವಾಕ್ಯದಲ್ಲಿ ಏನು ಹೇಳಿದ್ದೀರಿ ಎಂದರೆ.

> "It suggested creation of an expert committee to deal with all aspects of highrise building in the State."

ಎಂದು ಹೇಳಿದ್ದೀರಿ. ಈ ರೀತಿ ಆರ್.ಜಿ. ದೇಸಾಯಿಯವರ ತನಿಖಾ ವರದಿಯ ಪ್ರಕಾರ ಈ ರಾಜ್ಯದಲ್ಲಿ ನೀವು ಎಕ್ಸ್‌ಪರ್ಟ್ಸ್ ಕಮಿಟಿಯೊಂದನ್ನು ನೇಮಕ ಮಾಡಿದ್ದೀರಾ ?

ಎರಡನೆಯದಾಗಿ, ಇಲ್ಲಿ ಕೊಟ್ಟಿರತಕ್ಕ ೫ ಪ್ರಕರಣಗಳ ವಿಚಾರಣಾ ಆಯೋಗದವರು ಬೆಳಕು ಚೆಲ್ಲಿರುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಆ ಪೋಲೀಸ್ ಅಧಿಕಾರಿಗಳನ್ನು ನೀವು ಏನು ಮಾಡಿದ್ದೀರಿ ? ಈ ವರದಿಯಲ್ಲಿ ಯಾರ ಯಾರ ಮೇಲೆ ಆಪಾದನೆಗಳಿವೆ ಅವರು ಇನ್ನೂ ಅಧಿಕಾರದಲ್ಲಿದ್ದಾರೆಯೆ ? ಅಥವಾ ಅವರನ್ನು ಅಮಾನತ್ತಿನಲ್ಲಿ ಇಟ್ಟಿದ್ದೀರಾ ? ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ಎಂಬ ದನ್ನು ತಾವು ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮುಂದಿನ ಕ್ರಮ ತೆಗೆದುಕೊಳ್ಳುವ ಸಲುವಾಗಿ ತಜ್ಞರ ಸಮಿತಿಯನ್ನು ನೇಮಕ ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿದ್ದೇವೆ.

ಶ್ರೀ ಆರ್.ಎನ್.ನಾಯಕ್.—ಈಗ ನೀವು ಎಕ್ಸ್‌ಪರ್ಟ್ಸ್ ಕಮಿಟಿಯನ್ನು ನೇಮಕ ಮಾಡಿದ್ದೀರೋ ಇಲ್ಲವೋ ? ಅದನ್ನು ತಿಳಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ಎಕ್ಸ್‌ಪರ್ಟ್ಸ್ ಕಮಿಟಿಯನ್ನು ಮಾಡುವುದಕ್ಕೆ ನಾವು ಆದೇಶ ಕೊಟ್ಟಿದ್ದೇವೆ. ಇದನ್ನು ಮಾಡಬೇಕಾದವರು ಬೆಂಗಳೂರು ನಗರ ಸಭೆಯವರು. ಆದ್ದರಿಂದ ಅವರಿಗೆ ನಾವು ಆದೇಶವನ್ನು ಕೊಟ್ಟು ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಪೋಲೀಸರ ಮೇಲೆ ಕ್ರಮ ತೆಗೆದುಕೊಂಡಿರತಕ್ಕ ಬಗ್ಗೆ ಆಗಲಿ, ಅಥವಾ ಅವರನ್ನು ಸಸ್ಪೆಂಡ್ ಮಾಡಿರುವ ಬಗ್ಗೆ ಆಗಲಿ ನನ್ನ ಹತ್ತಿರ ಮಾಹಿತಿ ಇಲ್ಲ, ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ತನಿಖಾ ಆಯೋಗದ ವರದಿ ಬಂದಮೇಲೆ ನೀವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಂಥ ಒಂದು ಆಪಾದನೆ ಇರತಕ್ಕವರನ್ನು ತನಿಖೆ ಮುಗಿಯುವವರೆಗೂ ಬೇರೆ ಕಡೆಗೆ ಅವರನ್ನು ವರ್ಗ ಮಾಡಬೇಕು, ಇಲ್ಲವೇ ಸಸ್ಪೆಂಡ್ ಮಾಡಬೇಕು. ಅವರು ಎಷ್ಟೇ ದೊಡ್ಡ ಅಧಿಕಾರಿಗಳಾಗಿರಲಿ ಅವರನ್ನು ಸಸ್ಪೆಂಡ್ ಮಾಡಬೇಕು. ಇಲ್ಲದಿದ್ದರೆ ಅವರ ವಿರುದ್ಧ ಯಾರೂ ಕೂಡ ಸಾಕ್ಷ್ಯ ಹೇಳುವುದಕ್ಕೆ ಬರುವುದಿಲ್ಲ. ನಿಜಾಂಶ ಏನು ಎಂಬುದು ಜನರಿಗೆ ಗೊತ್ತಾಗುವುದಿಲ್ಲ. ಆದ್ದರಿಂದ ಅವರನ್ನು ಸಸ್ಪೆಂಡ್ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಅಷ್ಟೇ ಅಲ್ಲ ಆ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಮಾಹಿತಿ ಸರ್ಕಾರಕ್ಕೆ ಗೊತ್ತಿಲ್ಲ ಎಂದರೆ ನಾವು ಏನು ಹೇಳಬೇಕು ? ಈಗಲಾದರೂ ಮಾಹಿತಿಯನ್ನು ತರಿಸಿಕೊಂಡು ನಮಗೆ ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ವರದಿಯಲ್ಲಿ ಗುರುತರವಾದ ಆಪಾದನೆಗಳು ಬಂದಿವೆ. ಡಿಪಾರ್ಟ್‌ಮೆಂಟ್‌ನಲ್ಲಿ ಎನ್‌ಕ್ವೈರಿ ಆಗಬೇಕಾಗಿದೆ. ಆದರೆ ಈಗ ಈ ಅಧಿಕಾರಿಗಳನ್ನು ಸಸ್ಪೆಂಡ್ ಮಾಡತಕ್ಕ ಪರಿಸ್ಥಿತಿ ಬರುವುದಿಲ್ಲ. ಅವರು ಕಾಗದಪತ್ರಗಳನ್ನು ಟ್ಯಾಂಪರ್ ಮಾಡುವುದಕ್ಕಾಗಲಿ ಅಥವಾ ಡ್ಯಾಫ್ಟ್‌ನನ್ನು ಆಗಲಿ ಟ್ಯಾಂಪರ್ ಮಾಡಲು ಅವಕಾಶ ಆಗದಿರುವಂತೆ ನಾನು ಕ್ರಮ ಕೈಗೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.— ನ್ಯಾಯಾಂಗ ವಿಚಾರಣೆಯಾಗಿ ಯಾರು ತಪ್ಪಿತಸ್ಥರು ಎಂದು ಕಂಡುಬರುತ್ತಾರೆ ಅವರ ಬಗ್ಗೆ ಕಡ್ಡಾಯವಾಗಿ ಮುಂದಿನ ಕ್ರಮ ಜರುಗಿಸುವುದು ಸೂಕ್ತವಾಗಿರುತ್ತದೆ. ಈಗ ಏನಾಗಿದೆ ಎಂದರೆ ನ್ಯಾಯಾಂಗ ವಿಚಾರಣೆಯಾಗಿ ತಪ್ಪಿತಸ್ಥರು ಎಂದು ಕಂಡುಬಂದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳದೆ ಅವರಿಗೆ ಭಡ್ತಿಯನ್ನು ಕೊಟ್ಟಿರತಕ್ಕಂಥ ಉದಾಹರಣೆಗಳು ಕಂಡು ಬಂದಿರುತ್ತದೆ. ಇದರ ಬಗ್ಗೆ ಸರ್ಕಾರದವರ ಉತ್ತರವೇನು ಎಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿಯನ್ನು ಇನ್‌ವೆಸ್ಟಿಗೇಟ್ ಮಾಡುತ್ತೇವೆ. ಇನ್‌ವೆಸ್ಟಿಗೇಟ್ ಮಾಡಿ ಪೂರ್ಣ ವಿಚಾರಣೆಯಾದ ಮೇಲೆ ತಪ್ಪಿತಸ್ಥರು ಎಂದು ಕಂಡುಬಂದಲ್ಲಿ ಅವರ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಮಧ್ಯೆ ಪ್ರಮೋಷನ್‌ಗೆ ಅವಕಾಶ ಬಂದಾಗ ಪ್ರಮೋಷನ್ ಕೂಡ ಕೊಟ್ಟಿರುತ್ತೇವೆ. ಇದನ್ನು ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ. ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿಯಾದ ಮೇಲೆ ಅವರೇ ಶಿಕ್ಷೆಯನ್ನು ಕೂಡ ಕೊಡುತ್ತಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಆಗಿ ಮುಗಿಯುವುದರ ಒಳಗಾಗಿ ರಿಟೈರ್ಡ್ ಆಗಿ ಬಿಟ್ಟಿರುತ್ತಾರೆ. ಆದ್ದರಿಂದ ವಿಚಾರಣೆಗೆ ಏನಾದರೂ ಬೆಲೆ ಬರಬೇಕಾದರೆ,

ವಿಚಾರಣೆಯಾಗಿ ತೀರ್ಮಾನ ಬಂದ ತಕ್ಷಣವೇ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅದು ಡಯಲ್ಯೂಟ್ ಆಗಿಹೋಗುತ್ತದೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಚೌಕಟ್ಟಿನಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುತ್ತೇವೆ. ಮತ್ತೆ ರಿಟೈರ್ಡ್ ಆದಮೇಲೆ ಏನು ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥದ್ದು ಕೂಡ ಸರ್ಕಾರಕ್ಕೆ ಗೊತ್ತಿದೆ. ಆ ಬಗ್ಗೆ ಏನು ಮಾಡಬೇಕು ಎನ್ನುವ ಸೂಚನೆಯನ್ನು ಕೊಟ್ಟಿರುತ್ತಾರೋ ಅದನ್ನು ಕೂಡ ಒಪ್ಪಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನ್ಯಾಯಾಂಗ ತನಿಖೆ ನಡದು, ಅಧಿಕಾರಿ ತಪ್ಪಿಸ್ಥ ಎಂದು ಹೇಳಿದಮೇಲೆ ಅವರಿಗೆ ಪ್ರಮೋಷನ್ ಕೊಡತಕ್ಕಂಥ ವ್ಯವಸ್ಥೆ ಇರುತ್ತದೆ. ಇದನ್ನು ನೋಡಿದರೆ ಈ ನ್ಯಾಯಾಂಗ ತನಿಖೆಯನ್ನು ರಾಜ್ಯದಲ್ಲಿ ಯಾರ ಕಣ್ಣುಮುಚ್ಚುವುದಕ್ಕೆ ಮಾಡುತ್ತೀರಿ ಎಂದು ಕೇಳುತಿದ್ದೇನೆ. ನ್ಯಾಯಾಂಗ ತನಿಖೆಯಾದಮೇಲೆ, ಯಾವರೀತಿ ತೀರ್ಮಾನ ಕೊಟ್ಟಿರುತ್ತಾರೋ ಅದರಂತೆ ಕ್ರಮ ತೆಗೆದುಕೊಳ್ಳದೆ ಸಸ್ಪೆನ್ಷನ್‌ನಲ್ಲಿ ಇಡತಕ್ಕಂಥದ್ದು ಜನರ ಕಣ್ಣಿಗೆ ಮಂಚ್ಚಾಲೆಯಾಟವೆಂದು ಹೇಳಬೇಕಾಗುತ್ತದೆ, ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಕೆಲವು ಅಡ್ಮಿನಿಸ್ಟ್ರೇಷನ್ ಮ್ಯಾಟರ್ಸ್‌ನಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ಗಂಭೀರವಾದ ಆಪಾದನೆ ಇದ್ದಲ್ಲಿ ಕ್ರಿಮಿನಲ್ ಪ್ರೊಸೀಜರ್ ಪ್ರಕಾರವಾಗಿ ವಿಚಾರಣೆ ಆಗಬೇಕಾಗುತ್ತದೆ. ಇಂತಹ ಆಪಾದನೆಗಳು ಇದ್ದಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದಿಲ್ಲ. ಆದರೆ ಕ್ರಿಮಿನಲ್ ಪ್ರೊಸೀಜರ್ ಪ್ರಕಾರವಾಗಿ ವಿಚಾರಣೆ ಆಗಿ ತೀರ್ಮಾನ ಬಂದ ತಕ್ಷಣವೇ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅದು ಡಯಲ್ಯೂಟ್ ಆಗಿಹೋಗುತ್ತದೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಚೌಕಟ್ಟಿನಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುತ್ತೇವೆ. ಮತ್ತೆ ರಿಟೈರ್ಡ್ ಆದಮೇಲೆ ಏನು ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥದ್ದು ಕೂಡ ಸರ್ಕಾರಕ್ಕೆ ಗೊತ್ತಿದೆ. ಆ ಬಗ್ಗೆ ಏನು ಮಾಡಬೇಕು ಎನ್ನುವ ಸೂಚನೆಯನ್ನು ಕೊಟ್ಟಿರುತ್ತಾರೋ ಅದನ್ನು ಕೂಡ ಒಪ್ಪಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನ್ಯಾಯಾಂಗ ತನಿಖೆ ನಡದು, ಅಧಿಕಾರಿ ತಪ್ಪಿಸ್ಥ ಎಂದು ಹೇಳಿದಮೇಲೆ ಅವರಿಗೆ ಪ್ರಮೋಷನ್ ಕೊಡತಕ್ಕಂಥ ವ್ಯವಸ್ಥೆ ಇರುತ್ತದೆ. ಇದನ್ನು ನೋಡಿದರೆ ಈ ನ್ಯಾಯಾಂಗ ತನಿಖೆಯನ್ನು ರಾಜ್ಯದಲ್ಲಿ ಯಾರ ಕಣ್ಣುಮುಚ್ಚುವುದಕ್ಕೆ ಮಾಡುತ್ತೀರಿ ಎಂದು ಕೇಳುತಿದ್ದೇನೆ. ನ್ಯಾಯಾಂಗ ತನಿಖೆಯಾದಮೇಲೆ, ಯಾವರೀತಿ ತೀರ್ಮಾನ ಕೊಟ್ಟಿರುತ್ತಾರೋ ಅದರಂತೆ ಕ್ರಮ ತೆಗೆದುಕೊಳ್ಳದೆ ಸಸ್ಪೆನ್ಷನ್‌ನಲ್ಲಿ ಇಡತಕ್ಕಂಥದ್ದು ಜನರ ಕಣ್ಣಿಗೆ ಮಂಚ್ಚಾಲೆಯಾಟವೆಂದು ಹೇಳಬೇಕಾಗುತ್ತದೆ, ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಕೆಲವು ಅಡ್ಮಿನಿಸ್ಟ್ರೇಷನ್ ಮ್ಯಾಟರ್ಸ್‌ನಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ಗಂಭೀರವಾದ ಆಪಾದನೆ ಇದ್ದಲ್ಲಿ ಕ್ರಿಮಿನಲ್ ಪ್ರೊಸೀಜರ್ ಪ್ರಕಾರವಾಗಿ ವಿಚಾರಣೆ ಆಗಿ ತೀರ್ಮಾನ ಬಂದ ತಕ್ಷಣವೇ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅದು ಡಯಲ್ಯೂಟ್ ಆಗಿಹೋಗುತ್ತದೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಚೌಕಟ್ಟಿನಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುತ್ತೇವೆ. ಮತ್ತೆ ರಿಟೈರ್ಡ್ ಆದಮೇಲೆ ಏನು ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥದ್ದು ಕೂಡ ಸರ್ಕಾರಕ್ಕೆ ಗೊತ್ತಿದೆ. ಆ ಬಗ್ಗೆ ಏನು ಮಾಡಬೇಕು ಎನ್ನುವ ಸೂಚನೆಯನ್ನು ಕೊಟ್ಟಿರುತ್ತಾರೋ ಅದನ್ನು ಕೂಡ ಒಪ್ಪಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನ್ಯಾಯಾಂಗ ತನಿಖೆ ನಡದು, ಅಧಿಕಾರಿ ತಪ್ಪಿಸ್ಥ ಎಂದು ಹೇಳಿದಮೇಲೆ ಅವರಿಗೆ ಪ್ರಮೋಷನ್ ಕೊಡತಕ್ಕಂಥ ವ್ಯವಸ್ಥೆ ಇರುತ್ತದೆ. ಇದನ್ನು ನೋಡಿದರೆ ಈ ನ್ಯಾಯಾಂಗ ತನಿಖೆಯನ್ನು ರಾಜ್ಯದಲ್ಲಿ ಯಾರ ಕಣ್ಣುಮುಚ್ಚುವುದಕ್ಕೆ ಮಾಡುತ್ತೀರಿ ಎಂದು ಕೇಳುತಿದ್ದೇನೆ. ನ್ಯಾಯಾಂಗ ತನಿಖೆಯಾದಮೇಲೆ, ಯಾವರೀತಿ ತೀರ್ಮಾನ ಕೊಟ್ಟಿರುತ್ತಾರೋ ಅದರಂತೆ ಕ್ರಮ ತೆಗೆದುಕೊಳ್ಳದೆ ಸಸ್ಪೆನ್ಷನ್‌ನಲ್ಲಿ ಇಡತಕ್ಕಂಥದ್ದು ಜನರ ಕಣ್ಣಿಗೆ ಮಂಚ್ಚಾಲೆಯಾಟವೆಂದು ಹೇಳಬೇಕಾಗುತ್ತದೆ, ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಕೆಲವು ಅಡ್ಮಿನಿಸ್ಟ್ರೇಷನ್ ಮ್ಯಾಟರ್ಸ್‌ನಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ಗಂಭೀರವಾದ ಆಪಾದನೆ ಇದ್ದಲ್ಲಿ ಕ್ರಿಮಿನಲ್ ಪ್ರೊಸೀಜರ್ ಪ್ರಕಾರವಾಗಿ ವಿಚಾರಣೆ ಆಗಿ ತೀರ್ಮಾನ ಬಂದ ತಕ್ಷಣವೇ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅದು ಡಯಲ್ಯೂಟ್ ಆಗಿಹೋಗುತ್ತದೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ನಂಜನಗೂಡು ದಳವಾಯಿ ಶಾಲಾಗಾಗಿ ಹೊಸ ಕಟ್ಟಡದ ನಿರ್ಮಾಣ

೧೩೬೨ ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ನಂಜನಗೂಡಿನ ಹಳೆಯ ದಳವಾಯಿ ಶಾಲಾ ಕಟ್ಟಡವನ್ನು ಕೆಡವಿ ನೂತನ ಕಟ್ಟಡವನ್ನು ಕಟ್ಟಲು ಸರ್ಕಾರದವರು ಮಂಜೂರು ಮಾಡಿರುವುದು ನಿಜವೇ ?

(ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚವೆಷ್ಟು, ಮತ್ತು ಕಟ್ಟಡದ ಕೆಲಸ ಎಂದು ಪೂರ್ಣಗೊಳ್ಳುತ್ತದೆ ?

(೫) ಈ ಹಳೇ ಶಾಲೆಯ ಕಟ್ಟಡ, ಸಾಮಗ್ರಿಗಳು (ಮರ ಮುಟ್ಟು) ಬಹಳ ಬೆಲೆಬಾಳುವುದರಿಂದ ಅವುಗಳ ದುರುಪಯೋಗ ಆಗದಂತೆ ಸರ್ಕಾರದವರು (ಎಚ್ಚರಿಕೆ ವಹಿಸುವುದೇ) ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು)

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

(೫) ಹೊಸ ಕಟ್ಟಡ ಕಟ್ಟುವಾಗ ಹಳೇ ಸಾಮಗ್ರಿಗಳ ಸದುಪಯೋಗಕ್ಕೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಡಿ. ಬಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಏತಕ್ಕೆಂದರೆ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿರುತ್ತಾರೆಂದು ಅನುಮಾನವಾಗುತ್ತದೆ. ದಳವಾಯಿ ಶಾಲಾ ಕಟ್ಟಡವನ್ನು ಕೆಡವಿ ಹಾಕಿ ಹೊಸ ಕಟ್ಟಡವನ್ನು ಕಟ್ಟಲು ಮಂಜೂರಾತಿಯನ್ನು ಸಹ ಪಡೆದು, ತಾತ್ಕಾಲಿಕವಾಗಿ ಪೆಡ್ಡುಗಳ ನಿರ್ಮಾಣ ಕಾರ್ಯವನ್ನು ಸಂಬಂಧಪಟ್ಟ ಅಧಿಕಾರಿಗಳು ನನ್ನ ಪೀಡೆಯಿಂದ ಉದ್ಭವಿಸಿದನೆಯನ್ನೂ ಕೂಡ ಮಾಡಿಸಿರುತ್ತಾರೆ. ಹೊಸ ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಯಾವ ಮಂಜೂರಾತಿಯನ್ನು ನೀಡಿಲ್ಲವೆಂದು ಹೇಳುತ್ತಿರುವುದನ್ನು ನೋಡಿದರೆ ಏನೋ ಗಡಿ ಬಿಡಿಯಾಗಿದೆ ಎಂದು ಸ್ಪಷ್ಟವಾಗುತ್ತದೆ. ಆದ್ದರಿಂದ